ಸರ್ವೀಸ್ ಕೇರ್ ಲಿಮಿಟೆಡ್

ServiceCare™

ಸಿಐಎನ್: ಎಲ್74900ಕೆಎ2011ಪಿಎಲ್ಸಿ058639

ನೋಂದಾಯಿತ ಕಚೇರಿ: ನಂ. 653, 1ನೇ ಮಹಡಿ, 2ನೇ ಮುಖ್ಯರಸ್ತೆ, ರೊಮ್ಮಲೂರು ಬಡಾವಣೆ, ಬೆಂಗಳೂರು– 560071

ಇ–ಮೇಲ್: cs@servicecare.in ವೆಬ್‌ಸೈಟ್: www.servicecare.in

15ನೇ ವಾರ್ಷಿಕ ಸರ್ವ ಸದಸ್ಯರ ಸಭೆ, ಇ–ಮತದಾನ ಮಾಹಿತಿ ಮತ್ತು ಪುಸ್ತಕ ತೀರುವಳಿ ನೋಟಿಸ್

ಈ ಮೂಲಕ ತಿಳಿಯಪಡಿಸುವುದೇನೆಂದರೆ:

1. ಸರ್ವೀಸ್ ಕೇರ್ ಲಿಮಿಟೆಡ್ (ಈ ಮೊದಲು ಸರ್ವೀಸ್ ಕೇರ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು) ಸದಸ್ಯರ 15ನೇ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ) ಶುಕ್ರವಾರ, 25ನೇ ಸೆಪ್ಟೆಂಬರ್, 2026ರಂದು ಮಧ್ಯಾಹ್ನ 12.00 ಗಂಟೆಗೆ (ಐಎಸ್‌ಟಿ) ವಿಡಿಯೊ ಕಾನ್ಫರೆನ್ಸಿಂಗ್ (ವಿಸಿ)/ಇತರ ದೃಶ್ಯ ಮಾಧ್ಯಮ ವಿಧಾನ (ಓಎವಿಎಂ) ಮೂಲಕ ಆಯೋಜಿಸಲು 21ನೇ ಜುಲೈ 2025 ರಂದು ಕಳುಹಿಸಿದ ನೋಟಿಸ್‌ನಲ್ಲಿ ಉಲ್ಲೇಖಿಸಿದ ನಡಾವಳಿಗಳನ್ನು ನಡೆಸುವ ಸಲುವಾಗಿ ನಡೆಸಲಾಗುತ್ತಿದೆ. ಕಂಪನಿಗಳ ಕಾಯ್ದೆ–2013ರ ಸೆಕ್ಷನ್ 103ರ ಅನ್ವಯ ವಿಸಿ/ಓಎವಿಎಂ ಮೂಲಕ ಹಾಜರಾದ ಸದಸ್ಯರನ್ನು ಕೋರಂ ಭರ್ತಿಯ ಉದ್ದೇಶದಿಂದ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

2. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ "(ಎಂಸಿಎ)" ಹೊರಡಿಸಿದ ಸುತ್ತೋಲೆ ಸಂಖ್ಯೆ 14/2020, 17/2020, 20/2020, 02/2021, 21/2021, 02/2022 ಮತ್ತು 10/2022 ಕ್ರಮವಾಗಿ ದಿನಾಂಕ ಏಪ್ರಿಲ್ 8, 2020, ಏಪ್ರಿಲ್ 13, 2020, ಮೇ 5, 2020, ಜನವರಿ 13, 2021, ಡಿಸೆಂಬರ್ 14, 2021, ಮೇ 5, 2022 ಮತ್ತು ಡಿಸೆಂಬರ್ 28, 2022ರ ಅನ್ವಯ ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಕ್ರಮವಾಗಿ ದಿನಾಂಕ ಮೇ 12, 2020, ಜನವರಿ 15, 2021, ಮೇ 13, 2022 ಮತ್ತು ಜನವರಿ 05, 2024ರಂದು ಹೊರಡಿಸಿದ ಸುತ್ತೋಲೆ ಸಂಖ್ಯೆಗಳಾದ ಸೆಬಿ/ಎಚ್‌ಒ/ಸಿಎಫ್‌ಡಿ/ಸಿಎಂಡಿ1/ಸಿಐಆರ್/ಪಿ/2020/79, ಸೆಬಿ/ಎಚ್‌ಒ/ಸಿಎಫ್‌ಡಿ/ಸಿಎಂಡಿ2/ಸಿಐಆರ್/ಪಿ/2021/11, ಸೆಬಿ/ಎಚ್‌ಒ/ಸಿಎಫ್‌ಡಿ/ಸಿಎಂಡಿ2/ಸಿಐಆರ್/ಪಿ/2022/62 ಮತ್ತು ಸೆಬಿ/ಎಚ್‌ಒ/ಸಿಎಫ್‌ಡಿ/ಸಿಎಂಡಿ2/ಸಿಐಆರ್/ಪಿ/2023/4 ಅನುಸಾರ ಮತ್ತು ಎಂಸಿಎ ಮತ್ತು ಸೆಬಿ ಕಾಲಕಾಲಕ್ಕೆ ಹೊರಡಿಸಿರುವ ಸೂಕ್ತ ಸುತ್ತೋಲೆಗಳ ಅನುಸಾರ, ಕಂಪನಿಯ ಎಜಿಎಂ ಅನ್ನು ಸದಸ್ಯರ ಹಾಜರಾತಿ ಇಲ್ಲದೇ ವಿಸಿ/ಓಎವಿಎಂ ವಿಧಾನದ ಮೂಲಕ ನಡೆಸಲು ಅನುಮತಿಸಲಾಗಿದೆ. ಕಂಪನಿಯ ಎಜಿಎಂ ಅನ್ನು ವಿಸಿ/ ಓಎವಿಎಂ ಮೂಲಕ ನಡೆಸಲಾಗುತ್ತದೆ. ಎಂಸಿಎ ಸುತ್ತೋಲೆಗಳಿಗೆ ಮತ್ತು ಸೆಬಿ ಸುತ್ತೋಲೆಗಳಿಗೆ ಬದ್ಧವಾಗಿ, ಎಜಿಎಂ ನೋಟಿಸ್‌ನ ಎಲೆಕ್ಟ್ರಾನಿಕ್ ಪ್ರತಿ, ವಿಧಿವಿಧಾನಗಳು, 2025–26ನೇ ಹಣಕಾಸು ವರ್ಷದ ವಾರ್ಷಿಕ ವರದಿ, ನಿರ್ದೇಶಕರ ವರದಿ ಹಾಗೂ ಅದರ ಅನುಬಂಧಗಳು, ಲೆಕ್ಕ ಪರಿಶೋಧಕರ ವರದಿ ಮತ್ತು ಪರಿಶೋಧಿತ ಹಣಕಾಸು ಹೇಳಿಕೆಗಳನ್ನು ಸೆಪ್ಟೆಂಬರ್ 02, 2026ರಂದು ಎಲೆಕ್ಟ್ರಾನಿಕ್ ವಿಧಾನದಲ್ಲಿ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ)–ಇಂಟೆಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಅವರ ಇ–ಮೇಲ್ ಐಡಿಗಳನ್ನು ನೋಂದಾಯಿಸಿದ ಎಲ್ಲ ಸದಸ್ಯರಿಗೆ ಕಳುಹಿಸಿರುತ್ತಾರೆ.

3. 15ನೇ ಎಜಿಎಂ ನೋಟಿಸ್ ಮತ್ತು 2025–2026ನೇ ಹಣಕಾಸು ವರದಿಯು ಕಂಪನಿಯ ವೆಬ್‌ಸೈಟ್ www.servicecare.in ಮತ್ತು ಕಂಪನಿಯ ಷೇರುಗಳು ನೋಂದಣಿಯಾದ ಸ್ಟಾಕ್ ಎಕ್ಸ್‌ಚೇಂಜ್ www.nseindia.com ಮತ್ತು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ವೆಬ್‌ಸೈಟ್ https://www.cdslindia.com/ನಲ್ಲಿ ಲಭ್ಯವಿದೆ.

4. ಕಂಪನಿಗಳ ಕಾಯ್ದೆ– 2013ರ ಸೆಕ್ಷನ್ 108ರ ಅನ್ವಯ ಮತ್ತು ಅದರ ಅಡಿಯಲ್ಲಿ ರೂಪಿಸಿರುವ ನಿಯಮಾವಳಿಗಳ ಅನ್ವಯ ಕಟ್ಆಫ್ ದಿನಾಂಕವೆಂದು (ಇ–ಮತದಾನಕ್ಕೆ ದಾಖಲಾದ ದಿನಾಂಕ) ಅಂದರೆ ಶುಕ್ರವಾರ 18ನೇ ಸೆಪ್ಟೆಂಬರ್ 2026ರಂದು ಭೌತಿಕ ವಿಧಾನ ಮತ್ತು ಡಿಮೆಟೀರಿಯಲೈಸ್ಡ್ ವಿಧಾನದಲ್ಲಿ ಹೇರುಗಳನ್ನು ಹೊಂದಿರುವ ಸದಸ್ಯರಿಗೆ 15ನೇ ಎಜಿಎಂ ನೋಟಿಸ್‌ನಲ್ಲಿ ನಿಗದಿಪಡಿಸಲಾದ ನಡಾವಳಿಗಳ ಮೇಲೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್)ನಲ್ಲಿ ಮತ ಚಲಾಯಿಸಲು ಅವಕಾಶ ಮಾಡಿಕೊಡಲಾಗಿದೆ. ಇ–ಮತದಾನದ ಅವಧಿಯು ಮಂಗಳವಾರ, 22ನೇ ಸೆಪ್ಟೆಂಬರ್, 2026ರಂದು ಬೆಳಗ್ಗೆ 9.00 ಗಂಟೆ (ಐಎಸ್‌ಟಿ)ಗೆ ಆರಂಭವಾಗುತ್ತದೆ ಹಾಗೂ ಗುರುವಾರ, 24ನೇ ಸೆಪ್ಟೆಂಬರ್ 2026ರಂದು ಸಂಜೆ 5.00 ಗಂಟೆಗೆ (ಐಎಸ್‌ಟಿ) ಕೊನೆಗೊಳ್ಳುತ್ತದೆ. ಆ ಬಳಿಕ ಇ–ಮತದಾನಕ್ಕೆ ಅವಕಾಶ ಇಲ್ಲ. ಒಂದು ಬಾರಿ ಒಂದು ನಿರ್ಣಯದ ಮೇಲೆ ಸದಸ್ಯರು ಇ–ಮತದಾನ ಮೂಲಕ ಮತ ಚಲಾಯಿಸಿದ ಬಳಿಕ ಪದೇ ಪದೇ ಅದನ್ನು ಬದಲಾಯಿಸಲು ಅವಕಾಶ ಇರುವುದಿಲ್ಲ. ಇ–ಮತದಾನ ಸೌಲಭ್ಯವು ಎಜಿಎಂನಲ್ಲಿ ಕೂಡಾ ಲಭ್ಯವಿದ್ದು, ರಿಮೋಟ್ ಇ–ಮತದಾನ ವ್ಯವಸ್ಥೆ ಮೂಲಕ ಮತ ಚಲಾಯಿಸದ ಸದಸ್ಯರು ತಮ್ಮ ಮತಗಳನ್ನು ಎಜಿಎಂನಲ್ಲಿ ಚಲಾಯಿಸಲು ಅವಕಾಶವಿದೆ.

5. ಯಾವುದೇ ವ್ಯಕ್ತಿಗಳು ನೋಟಿಸ್ ಕಳುಹಿಸಿದ ದಿನಾಂಕದ ಬಳಿಕ ಕಂಪನಿಯ ಸದಸ್ಯರಾಗಿ ಮತ್ತು ಕಟ್ಆಫ್ ದಿನಾಂಕದಂದು ಅಂದರೆ 18ನೇ ಸೆಪ್ಟೆಂಬರ್ 2026ರ ಮೊದಲು ಹೇರುಗಳನ್ನು ಹೊಂದಿದ್ದರೆ ಅಂಥವರು ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು https://www.evotingindia.comಗೆ ಮನವಿ ಸಲ್ಲಿಸುವ ಮೂಲಕ ಪಡೆಯಬಹುದಾಗಿದೆ. ಅದಾಗ್ಯೂ ನೀವು ಸಿಡಿಎಸ್‌ಎಲ್ ಬಳಿ ರಿಮೋಟ್ ಇ–ಮತದಾನಕ್ಕಾಗಿ ಈಗಾಗಲೇ ನೋಂದಾಯಿಸಿಕೊಂಡಿದ್ದರೆ, ನೀವು ಹಾಲಿ ಇರುವ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ನಿಮ್ಮ ಮತ ಚಲಾಯಿಸುವ ಸಲುವಾಗಿ ಬಳಸಿಕೊಳ್ಳಬಹುದು.

6. ವಿಧಿವಿಧಾನಗಳು ಮತ್ತು ಇ–ಮತದಾನದ ವಿಧಾನಕ್ಕಾಗಿ ಸದಸ್ಯರು 15ನೇ ಎಜಿಎಂ ನೋಟಿಸ್‌ನಲ್ಲಿ ನೀಡಿರುವ ಸೂಚನೆಗಳನ್ನು ಪರಾಮರ್ಶಿಸಬಹುದು ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯು https://www.evotingindia.com/ನಲ್ಲಿ ಲಭ್ಯವಿದೆ ಅಥವಾ 022–23023333 ಮತ್ತು 18002255333ಗೆ ಕರೆ ಮಾಡಬಹುದು.

7. ಕಂಪನಿಗಳ ಕಾಯ್ದೆ–2013ರ ಸೆಕ್ಷನ್ 91 ಮತ್ತು ಸೆಬಿ (ಲಿಸ್ಟಿಂಗ್ ಒಬ್ಲಿಗೇಶನ್ & ಡಿಸ್‌ಕ್ಲೋಶರ್ ರಿಕ್ವಯರ್‌ಮೆಂಟ್) ನಿಬಂಧನೆಗಳು–2015ರ ಅನುಸಾರ ಕಂಪನಿಯ ಸದಸ್ಯರ ನೋಂದಣಿ ಪುಸ್ತಕ ಮತ್ತು ಷೇರು ವರ್ಗಾವಣೆ ಪುಸ್ತಕಗಳು ಶನಿವಾರ 19ನೇ ಸೆಪ್ಟೆಂಬರ್, 2026 ರಿಂದ ಶುಕ್ರವಾರ 25ನೇ ಸೆಪ್ಟೆಂಬರ್ 2026 (ಎರಡೂ ದಿನಗಳು ಸೇರಿ) ವರೆಗೆ ಮುಚ್ಚಿರುತ್ತವೆ.

ಸರ್ವೀಸ್ ಕೇರ್ ಲಿಮಿಟೆಡ್ ಪರವಾಗಿ
(ಈ ಮೊದಲು ಸರ್ವೀಸ್ ಕೇರ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು)
ಫಾನಿ ಜಲಾಲ್
ವ್ಯವಸ್ಥಾಪಕ ನಿರ್ದೇಶಕರು

ದಿನಾಂಕ: 02ನೇ ಸೆಪ್ಟೆಂಬರ್ 2026
ಸ್ಥಳ: ಬೆಂಗಳೂರು